೬. ಶಿವಮೊಗ್ಗದ ಹೊಳಲೂರಿನ ದೇವಸ್ಥಾನದ ಜಮೀನನ್ನು ಶ್ರೀಮಂತರು ಒತ್ತುವರಿ ಮಾಡಿರುವುದು.

ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ತಾಲ್ಲೂಕು, ಹೊಳಲೂರು ಹೋಬಳಿ ಮೇಲಿನ ಹನಸವಾಡಿ ಗ್ರಾಮದಲ್ಲಿ ಶ್ರೀ ರಾಮದೇವರ ಕೆರೆ ಇರುತ್ತೆ. ಈ ಕೆರೆ ೮೮ ಎಕರೆ ವಿಸ್ತೀರ್ಣವಿದ್ದು ಸುಮಾರು ೫೦೦ ಎಕರೆಗೆ ಹಾಯುವರಿ ಆಗುತ್ತಿತ್ತು. ಈ ಕೆರೆಯನ್ನು ತುಂಗಾ ಎಡ ನಾಲೆಯ ಭಾರಿ ನೀರು ಶೇಖರಣೆ ಕೆರೆಯಾಗಿ ಪರಿವರ್ತಿಸಿದ್ದು ಸರಿಯಷ್ಟೆ. ಈಗ ಹಾಲಿ ಕೆರೆಯನ್ನು ಅಕ್ರಮವಾಗಿ ಅನೇಕ ಶ್ರೀಮಂತ ವರ್ಗದವರು ಒತ್ತುವರಿ ಮಾಡಿದ್ದು, ಕೆರೆಯ ಕೋಡಿಯನ್ನು ಸಹ ಶ್ರೀಮಂತರ ಒತ್ತಡದೀದ ೨–೩ ಅಡಿ ತಗ್ಗಿಸಿ ಕಟ್ಟಿಸಿದ್ದು ಬೆಳಕಿಗೆ ಬಂದಿದೆ.

ಹಾಯುವರಿ ಆಚ್ಚುಕಟ್ಟು ರೈತರಿಗೆ ಕೆರೆಗೆ ಸಾಕಷ್ಟು ನೀರಿಲ್ಲದೆ ತೊಂದರೆಯಾಗಿದೆ. ಈ ರೀತಿ ಹೆಚ್ಚು ಉಪಯುಕ್ತವಾದ ಕೆರೆ ನೀರನ್ನೆಲ್ಲಾ ಶ್ರೀಮಂತರು ಹಾಗೂ ಬಲಾಢ್ಯರು ಕಬಳಿಸಿ ಬಡ ರೈತರಿಗೆ ದ್ರೋಹ ಮಾಡುವುದರ ಜೊತೆಗೆ ಕಾನೂನು ಬಾಹಿರ, ದೇಶದ್ರೋಹದ ಕೆಲಸ ಮಾಡುತ್ತಿದ್ದಾರೆ. ಇಂಥ ಹಗರಣದ ಮೇಲೆ ಸೂಕ್ತ ಕ್ರಮ ತೆಗೆದುಕೊಂಡು ಒತ್ತುವರಿ ಕೆರೆಯನ್ನು ಬಿಡಿಸಿ ಕೆರೆಯ ಕೋಡಿಯನ್ನು ಮೂಲ ರೀತಿಯಲ್ಲಿ ಉಳಿಸಿಕೊಡುವಂತೆ ಸರ್ಕಾರದ ಗಮನವನ್ನು ಸೆಳೆದು ಒತ್ತಾಯಿಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಇಲಾಖಾ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಶ್ರೀ ಸ್ವಾಮಿರಾವ್ ಈಗ ಏನು ಹೇಳಿದ್ದಾರೆ ಅದರ ಬಗ್ಗೆ ತೀವ್ರ ಗಮನವನ್ನು ಹರಿಸುತ್ತೇನೆ.

೭. ಬಾಗೇಪಲ್ಲಿ ಆಸ್ಪತ್ರೆಯಲ್ಲಿ ವೈದ್ಯರು ಎರಡು ಗಂಟೆಗಳ ಕಾಲ ಮಾತ್ರ ಕೆಲಸ ಮಾಡುವುದರ ಬಗ್ಗೆ

ಶ್ರೀ ಬಿ. ನಾರಾಯಣಸ್ವಾಮಿ.—ಮಾನ್ಯ ಅಧ್ಯಕ್ಷರೇ, ಬಾಗೇಪಲ್ಲಿ ಕ್ಷೇತ್ರದಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಒಂದು ದಿವಸಕ್ಕೆ ಕೇವಲ ಎರಡು ಗಂಟೆಗಳ ಕಾಲ ಕೆಲಸ ಮಾಡುತ್ತಿದ್ದಾರೆ. ಬೆಳಿಗ್ಗೆ ೧೦ ಗಂಟೆಗೆ ಬಂದರೆ ೧೨ ಗಂಟೆಗೆ ವಾಪಸ್ಸು ಹೋಗುತ್ತಾರೆ. ಸರ್ಕಾರದ ವೈದ್ಯರುಗಳಿಗೆ ೨ ಗಂಟೆ ಕಾಲ ಕೆಲಸ ಮಾಡುವುದಕ್ಕೆ ಸಂಬಳ ಕೊಡುತ್ತೀರಾ ಅಥವಾ ತಿಂಗಳು ಪೂರ್ತಿ ಕೆಲಸ ಮಾಡುವುದಕ್ಕೆ ಕೊಡುತ್ತೀರಾ ದಯವಿಟ್ಟು ತಿಳಿಸಿರಿ ? ಸರ್ಕಾರಿ ವೈದ್ಯರು ಖಾಸಗಿ ವೈದ್ಯಶಾಲೆಗಳನ್ನು ನಡೆಸಲು ಸರ್ಕಾರದವರು ಅನುಮತಿ ಕೊಟ್ಟಿದ್ದಾರೋ ಇಲ್ಲವೋ ದಯವಿಟ್ಟು ತಿಳಿಸುವರೆ ? ಅದೇ ರೀತಿ ನನ್ನ ಕ್ಷೇತ್ರದಲ್ಲಿ ಸರ್ಕಾರಿ ವೈದ್ಯರುಗಳು ಖಾಸಗಿ ವೈದ್ಯ ಶಾಲೆಗಳನ್ನು ನಡೆಸುವ ಸಂಖ್ಯೆ ಎಷ್ಟು ಎಂದು ದಯವಿಟ್ಟು ತಿಳಿಸುವರಿ ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—ಮಾನ್ಯ ಸದಸ್ಯರು ಈಗ ತಿಳಿಸಿದಂಥ ವಿಷಯವನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದು ಅದರ ಮೇಲೆ ಕಾರ್ಯಕ್ರಮ ಕೈಗೊಳ್ಳುವಂತೆ ತಿಳಿಸುತ್ತೇನೆ.

೮. ತುಂಗಭದ್ರ ಎಡದಂಡೆ ನಾಲೆಯ ಆಚ್ಚುಕಟ್ಟು ಪ್ರದೇಶದ ರೈತರಿಗಾಗುತ್ತಾದ ತೊಂದರೆಯ ಬಗ್ಗೆ

ಶ್ರೀ ಶ್ರೀರಂಗದೇವರಾಯಲು.—ಸನ್ಮಾನ್ಯ ಅಧ್ಯಕ್ಷರೇ, ರಾಯಚೂರು ಜಿಲ್ಲೆಯ ಗಂಗಾವತಿ, ಸಿಂಧನೂರು, ಮಾನ್ವಿ, ತಾಲ್ಲೂಕುಗಳು ಹಾಗೂ ರಾಯಚೂರು ತಾಲ್ಲೂಕಿನ ಕೆಲವು ಭಾಗಗಳಲ್ಲಿ ಬರತಕ್ಕಂಥ ತುಂಗಭದ್ರ ಎಡದಂಡೆ ನಾಲೆಯ ಕೆಳಗಿನ ಆಚ್ಚುಕಟ್ಟು ಪ್ರದೇಶದಲ್ಲಿ ಬರತಕ್ಕ ಜಮೀನಿನಲ್ಲಿ ಆಗಿರುವ ಬೆಳೆಗೆ ನೀರೊದಗಿಸುವ ಸಂಬಂಧದಲ್ಲಿ ಮಂಬ್ಯೆ ಇಂಜಿನಿಯರ್‌ರವರು ಒಂದು ಹೇಳಿಗೆ ನೀಡಿ ಫೆಬ್ರವರಿ ೨೮ನೇ ತಾರೀಖಿನಂದು ನಾಲೆಯನ್ನು ಮುಚ್ಚಿಲಾಗುವುದೆಂದು ತಿಳಿಸಿದ್ದರು ಈ ಸಂದರ್ಭದಲ್ಲಿ ಜಿಲ್ಲೆಯ ಶಾಸಕರು ರೈತ ಮುಖಂಡರುಗಳು ಮಾನ್ಯ ಲೋಕೋಪಯೋಗಿ ಇಲಾಖೆಯ ಮಂತ್ರಿಗಳನ್ನು ಭೇಟಿ ಮಾಡಿ ಪರಿಸ್ಥಿತಿಯನ್ನು ವಿವರಿಸಿದಾಗ ಕೊನೆಯ ಹನಿ ಇರುವವರೆಗೂ ಸದರಿ ನಾಲೆಯನ್ನು ಮುಚ್ಚುವುದಿಲ್ಲವೆಂಬುದಾಗಿ ಆಶ್ವಾಸನೆಯನ್ನು ಜಿಲ್ಲೆಯ ಶಾಸಕರು ಹಾಗೂ ರೈತ ಮುಖಂಡರುಗಳಿಗೆ

ನೀಡಿದ್ದಾಗ್ಯೂ ಈಗ್ಗೆ ಮೂರು ದಿವಸಗಳ ಹಿಂದೆ ಸದರಿ ಮುಖ್ಯ ಇಂಜನೀಯರ್‌ರವರು ಮತ್ತೆ ಹೇಳಿಕೆ ನೀಡಿ ಮಾರ್ಚಿ ೨೦ ರಂದು ನಾಲೆಯನ್ನು ಮುಚ್ಚುವುದಾಗಿ ತಿಳಿಸಿರುತ್ತಾರೆ. ಇದರಿಂದ ಬೆಳೆ ಒಣಗುವುದಲ್ಲದೆ ರೈತರಿಗೆ ತೊಂದರೆ ಯಾಗುವುದರಿಂದ ಮಾನ್ಯ ಮಂತ್ರಿಗಳು ಈ ಬಗ್ಗೆ ಹೇಳಿಕೆ ನೀಡಬೇಕೆಂದು ಒತ್ತಾಯಿಸುತ್ತೇನೆ

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಇಲಾಖಾ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ಈ ವಿಷಯ ಒಂದಲ್ಲ ಎರಡು ಸಾರಿ, ಮೂರು ಸಾರಿ ಈ ಸಭೆಯಲ್ಲಿ ಬಂದಿದೆ. ಇದರ ಬಗ್ಗೆ ಸರ್ಕಾರ ಕೂಡ ಸಾಕಷ್ಟು ಸಾರಿ ಚರ್ಚೆ ಮಾಡಿದೆ. ಇದರ ಬಗ್ಗೆ ನಿನ್ನೆ ಮಧ್ಯಾಹ್ನ ಕೂಡ ಚರ್ಚೆ ಮಾಡಿದೆ. ತುಂಗಭದ್ರ ಎಡದಂಡೆ ನಾಲೆಯಲ್ಲಿ ಈಗ ಅಲ್ಲಿರತಕ್ಕಂಥಾ ಬೆಳೆಗಳನ್ನು ಉಳಿಸಿಕೊಳ್ಳುವುದಕ್ಕಾಗಿ ನೀರನ್ನು ಕೊಡತಕ್ಕಂಥಾ ಅವಧಿಯನ್ನು ಮುಂದುವರಿಸಬೇಕು ಎಂದು ಸನ್ಮಾನ್ಯ ಸದಸ್ಯರು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಸ್ವಾಮಿ, ನಾನು ಶಾಸಕರು, ಅಲ್ಲಿನ ರೈತ ಮುಖಂಡರುಗಳು, ಅಲ್ಲಿನ ಅಧಿಕಾರಿಗಳು, ಮತ್ತು ಜಿಲ್ಲಾಧಿಕಾರಿಗಳು ಇವರೆಲ್ಲರನ್ನೊಳಗೊಂಡ ಸಭೆಯಲ್ಲಿ ಅವರು ಹೇಳಿದಂಥ ನಿರ್ಣಯವನ್ನು ತೆಗೆದುಕೊಂಡಿದ್ದು ನಿಜ. ಆದೇನೂ ಅಸತ್ಯವಲ್ಲ. ಅಲ್ಲಿ ಕೊನೆಯ ನೀರು ಇರುವ ವರೆಗೂ ಕೊಡುತ್ತೇವೆಂದು ಹೇಳಿದ್ದೇನೆ ಅವರು ಫೆಬ್ರುವರಿ ೨೮ನೆಯ ತಾರೀಖು ಆ ನಾಲೆಯ ನೀರನ್ನು ಬಿಡತಕ್ಕಂಥಾದ್ದರ ಬಗ್ಗೆ ನಿರ್ಣಯ ಆಗಿತ್ತು. ಇದರ ಬಗ್ಗೆ ನೋಟಿಫಿಕೇಷನ್ ಸಹ ಆಗಿತ್ತು. ಇದೇ ಸಭೆಯಲ್ಲಿ ಮಾರ್ಚಿ ೧೫ನೇ ತಾರೀಖಿನವರೆಗೆ ನೀರು ಕೊಡತಕ್ಕಂಥಾದ್ದರ ಬಗ್ಗೆ ಒಂದು ಅಂತಿಮ ನಿರ್ಣಯವನ್ನು ನಾವೆಲ್ಲರೂ ಸೇರಿ ತೆಗೆದುಕೊಂಡೆವು. ಅಲ್ಲಿ ಬೆಳೆಗಳು ಸ್ವಲ್ಪ ಹಿಂದು ಮುಂದು ಆಗಬಹುದು. ಆದರೆ ಈಗ ಬೆಳೆ ಅಲ್ಲಿ ಏನು ಇದೆ ಅದಕ್ಕೆ ನೀರನ್ನು ಕೊಡಬೇಕು, ಇಲ್ಲದೇ ಹೋದರೆ ಬಹಳ ಲುಕ್ಸಾನು ಆಗುತ್ತದೆ ಎಂದು ಹೇಳಿದ್ದರಿಂದ ಮಾರ್ಚಿ ೧೫ ರಿಂದ ಮಾರ್ಚಿ ೨೦ರವರೆಗೆ ಕೊಡುವ ಹಾಗೆ ನಮ್ಮ ಅಧಿಕಾರಿಗಳು ಸ್ವಲ್ಪ ಮುಂದಕ್ಕೆ ಹಾಕಿದರು. ಆದರೆ ತಮಗೆ ಅಲ್ಲಿರುವ ನಿಜ ಪರಿಸ್ಥಿತಿ ಹೇಳಬೇಕಾದರೆ ಅಲ್ಲಿ ಇರತಕ್ಕಂಥ ನೀರು ಕೇವಲ ೬ ಟಿ.ಎಂ.ಸಿ.ಎಫ್.ಟಿ. ಮಾತ್ರ. ನಾನು ನಿನ್ನೆಯ ದಿವಸ ತುಂಗಭದ್ರ ಮುಖ್ಯ ಇಂಜನೀಯರ್ ಅವರೊಂದಿಗೆ ಮಾತನಾಡಿದೆ. ಈ ದಿವಸವೂ ಬಂದಿದ್ದರು. ಅವರನ್ನು ನನ್ನ ಛೇಂಬರ್‌ಗೆ ಕರೆಸಿ ವಿಚಾರ ಮಾಡಿದ್ದೇನೆ. ಈಗ ಅವರು ಹೇಳಿದ ಪ್ರಕಾರ ೨.೬ ಟಿ.ಎಂ.ಸಿ.ಎಫ್.ಟಿ.ಯಷ್ಟು ನೀರನ್ನು ನಾವು ಆಂಧ್ರಕ್ಕೆ ಬಿಡಬೇಕಾಗುತ್ತದೆ. It is an Interstate Reservoir. ಈ ಒಂದು ರಿಸರ್ವಾಯರ್‌ನ ಹತೋಟಿ ಕರ್ನಾಟಕಕ್ಕೆ ಇಲ್ಲ. ಘಟಪ್ರಭಾ, ಮಲಪ್ರಭಾ, ಹಾರಂಗಿ, ಹೇಮಾವತಿ ಇದರ ವೇಳೆ ನಮಗೆ ಅಂದರೆ ರಾಜ್ಯ ಸರ್ಕಾರಕ್ಕೆ ಪೂರ್ಣ ಹತೋಟಿ ಇದೆ. ನಾನು ಮೊದಲೇ ಹೇಳಿದ ಹಾಗೆ ತುಂಗಭದ್ರ ಬಗ್ಗೆ ರಾಜ್ಯ ಸರ್ಕಾರದ ಪೂರ್ಣ ಹಿಡಿತ ಇಲ್ಲ. ಅದಕ್ಕೆ ಕೇಂದ್ರ ಸರ್ಕಾರದ ಪ್ರತಿನಿಧಿ ಇದ್ದಾರೆ. ಆಂಧ್ರ ಸರ್ಕಾರದ ಪ್ರತಿನಿಧಿ ಇದ್ದಾರೆ, ನಮ್ಮ ಸರ್ಕಾರದ ಪ್ರತಿನಿಧಿ ಇದ್ದಾರೆ. ಈ ಒಂದು ನಿಗಮಕ್ಕೆ, ಮತ್ತು ಈ ಒಂದು ಆಡಳಿತ ಮಂಡಲಿಗೆ ಈ ಮೂರೂವರು ಪ್ರತಿನಿಧಿಗಳು ಇರುವುದರಿಂದ ಅವರೆಲ್ಲರೂ ಕೂತುಕೊಂಡು ಈ ನೀರನ್ನು ಯಾವ್ಯಾವ ರೀತಿಯಾಗಿ ಷೇರು ಮಾಡಿಕೊಳ್ಳಬೇಕು ಎಂದು ನಿರ್ಧಾರ ಮಾಡಬೇಕು. ಇದಕ್ಕೆ ಕೆಲವು ನಿಬಂಧನೆಗಳು ಇವೆ, ಅದನ್ನು ನೋಡಿಕೊಂಡು ಅವರು ಮಾಡಬೇಕು. ತಮಗೆ ನಾನು ಮೊದಲೇ ಹೇಳಿದ ಹಾಗೆ ಅಲ್ಲಿ ಈಗ ಇರತಕ್ಕಂಥ ೬ ಟಿ.ಎಂ.ಸಿ.ಎಫ್.ಟಿ. ಯಷ್ಟು ನೀರಿನಲ್ಲಿ ಆಂಧ್ರಕ್ಕೆ ೨.೬ ಟಿ.ಎಂ.ಸಿ.ಎಫ್.ಟಿ ಯಷ್ಟು ನೀರನ್ನು ಕೊಟ್ಟು ಇನ್ನು ೨ ಟಿ.ಎಂ.ಸಿ.ಎಫ್.ಟಿ.ಯಷ್ಟು ನೀರನ್ನು ರೈಟ್ ಬ್ಯಾಂಕ್ ಕೆನಾಲ್‌ಗೆ ಸೇರಿರುವ ರೈತರಿಗೆ ಬಿಡಬೇಕಾಗುತ್ತದೆ. ಇದರ ಜೊತೆಗೆ ಕುಡಿಯುವ ನೀರನ್ನೂ ನೋಡಿಕೊಳ್ಳಬೇಕು. ಮತ್ತು ರಾಯಚೂರು ಮತ್ತು ಗಂಗಾವತಿ ಭಾಗಕ್ಕೆ, ಅಲ್ಲದೆ ಅದೇ ದಾರಿಯಲ್ಲಿ ಹಾದು ಹೋಗತಕ್ಕಂಥ ನಗರಗಳು ಮತ್ತು ಹಳ್ಳಿಗಳ ಜನರಿಗೆ ಕುಡಿಯುವ ನೀರಿನ ಅನುಕೂಲ ಮಾಡಿಕೊಡಬೇಕು. ಇದರ ಜೊತೆಗೆ ಈಗ ನೀರು ಮಿನಿಮಮ್ ಡ್ರಾಯಲ್ ಲೆವೆಲ್ ಏನು ಇರಬೇಕು ಅದಕ್ಕಿಂತ ೧.೮ ಮೀಟರ್‌ನಷ್ಟು ಕೆಳಗೆ ಹೋಗಿದೆ. ಈಗ ಅಲ್ಲಿರತಕ್ಕಂಥಾದ್ದು ೬ ಟಿ.ಎಂ.ಸಿ.ಎಫ್.ಟಿ. ಯಷ್ಟು ನೀರು. ಅದರಲ್ಲಿ ೨ ಟಿ.ಎ.ಸಿ.ಎಫ್.ಟಿ. ಯಷ್ಟು ರೈಟ್ ಬ್ಯಾಂಕ್ ಕೆನಾಲ್‌ಗೆ ಬಿಟ್ಟರೆ, ಅದು ಇನ್ನೂ ಕಡಿಮೆಯಾಗುತ್ತದೆ. ಆವಾಗ ಇವರಿಗೆ ನೀರು ಕೊಡಬೇಕಾದರೆ ಕಷ್ಟವಾಗಂತ್ತದೆ. ಈ ಬಗ್ಗೆ ನಾನು ನಿನ್ನೆ ದಿವಸ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿದೆ. ಅವರು ಇನ್ನೂ ಇಲ್ಲಿಗೆ ಬಂದಿಲ್ಲ ಬರುವವರಿದ್ದಾರೆ, ಬರುತ್ತಾ ಇರಬಹುದು ಅದರ ವಿವರಗಳನ್ನೆಲ್ಲಾ ತೆಗೆದು ಕೊಂಡು ಬನ್ನಿ ಇಲ್ಲಿ ಶಾಸಕರ ಜೊತೆಯಲ್ಲಿ ಚರ್ಚೆ ಮಾಡೋಣ ಅಂತ ಹೇಳಿದ್ದೇನೆ. ಅವರು ಈಗೊತ್ತು

ಎಷ್ಟು ವೇಗದಲ್ಲಿ ಬರುವುದಕ್ಕೆ ಸಾಧ್ಯ ಅಷ್ಟು ವೇಗದಲ್ಲಿ ಬರುತ್ತಾರೆ. ಅವರನ್ನೂ ಕರೆಸಿ ನಾವೆಲ್ಲಾ ಸೇರಿ ಚರ್ಚೆ ಮಾಡೋಣ. ಅವರು ನೀರು ಇಲ್ಲ ಎಂದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ಅವರ ಬಗ್ಗೆ ಸಹಾನುಭೂತಿ ಎಷ್ಟೇ ಇದ್ದರೂ ಅಲ್ಲಿರತಕ್ಕಂಥ ನೀರಿನ ಬಗ್ಗೆ ನನ್ನ ವ್ಯಾಪ್ತಿಯೊಳಗೆ ಏನು ಒಂದು ನಿರ್ಣಯ ಮಾಡಬೇಕೋ ಅದನ್ನು ಮಾಡುತ್ತೇನೆ. ಇನ್ನು ಹೆಚ್ಚಿಗೆ ಹೇಳಲಾರೆ. ಏತಕ್ಕೆಂದರೆ ನಾನಂ ಮೊದಲೇ ಹೇಳಿದ ಹಾಗೆ ೨.೬ ಟಿ.ಎಂ.ಸಿ.ಎಫ್.ಟಿ. ಯಷ್ಟು ನೀರನ್ನು ನಾವು ಆಂಧ್ರಕ್ಕೆ ಕೊಡ ಬೇಕು. ಆದರೆ ಇಲ್ಲಿ ಆ ಏರಿಯಾದಲ್ಲಿ ತೀವ್ರ ಬರಗಾಲ ಇದೆ ಎನ್ನುವುದು ದೇಶಕ್ಕೇ ಗೊತ್ತಿದೆ, ಪ್ರಧಾನಿಯವರಿಗೂ ಗೊತ್ತಿದೆ. ನಾನು ಈ ಬರಗಾಲ ಪರಿಸ್ಥಿತಿ ನೋಡಿ ಆಂಧ್ರದವರಿಗೆ ಒಂದು ವಿನಂತಿ ಮಾಡಿಕೊಳ್ಳಬೇಕು ಅನ್ನುವ ಯೋಚನೆ ಮಾಡುತ್ತಿದ್ದೇನೆ. ಅದೇನೆಂದರೆ ಅವರಿಗೆ ನಾವು ೨.೬ ಟಿ.ಎಂ.ಸಿ.ಎಫ್.ಟಿ. ಯಷ್ಟು ನೀರು ಏನು ಕೊಡಬೇಕೋ ಅದನ್ನು ಆ ಏರಿಯಾದಲ್ಲಿ ಬೆಳೆ ಬೆಳೆದು ನಿಂತಿರತಕ್ಕಂಥಾದ್ದಕ್ಕೆ ಅವರು ಸಹಕಾರ ಕೊಟ್ಟರೆ ಉಳಿಸಿಕೊಳ್ಳೋಣ ಅಂತ ಮಾಡಿದ್ದೇನೆ. ಅವರು ನಮಗೆ ಸಹಕಾರ ಕೊಟ್ಟು ಆ ನೀರನ್ನು ನಮಗೆ ಉಪಯೋಗ ಮಾಡಿಕೊಳ್ಳುವುದಕ್ಕೆ ಸಹಾನುಭೂತಿ ಕೊಡುವುದಾದರೆ ಈ ೨.೬ ಟಿ.ಎಂ.ಸಿ.ಎಫ್.ಟಿ. ಯಷ್ಟು ನೀರನ್ನು ಮುಂದಿನ ದಿನಗಳಲ್ಲಿ ಬಿಡುವುದಕ್ಕೆ ಸಿದ್ಧರಾಗಿದ್ದೇವೆ. ಅವರು ಈ ನೀರನ್ನು ಉಳಿಸಿಕೊಟ್ಟರೆ ಬೆಳೆ ನಿಂತಿರತಕ್ಕವರಿಗೆ ಬಹಳಷ್ಟು ಸಹಾಯ ವಾಗುತ್ತದೆ. ಅವರು ನಮಗೆ ಸಹಾಯ ಮಾಡಬಹುದು ಅನ್ನುವ ಆಸೆಯನ್ನು ಇಟ್ಟುಕೊಂಡಿದ್ದೇನೆ. ಈ ಒಂದು ಪ್ರಯತ್ನ ನಾವು ಮಾಡುತ್ತಿದ್ದೇವೆ. ಈ ರೀತಿಯಾಗಿ ನಮ್ಮ ಅಭಿಪ್ರಾಯ ಇದೆ. ಆದರೆ ನಮ್ಮ ಒಂದು ಇತಿಮಿತಿಯೊಳಗೆ ಅಲ್ಲದೆ, ಅದಕ್ಕಿಂತಲೂ ಶಕ್ತಿ ಮೀರಿ ಪ್ರಯತ್ನ ಮಾಡುತ್ತಿದ್ದೇವೆ. ಇನ್ನೂ ಇದಕ್ಕಿಂತ ಹೆಚ್ಚಿಗೆ ನಿಮಗೆ ಹೇಳಲಾರೆ.

೯ ಮೈಸೂರಿನ ಜನಾರ್ಧನ ಎಂಬುವರಿಗೆ ಪೋಲೀಸರು ಕಿರುಕುಳ ಕೊಟ್ಟಿರುವ ಬಗ್ಗೆ

SMT. MUKHTARUNNISA BEGAM.—Shri Janardhan, owner of Raghuveer Jewellers in Mysore was subjected harassment by the Police in January 1986, alleging that he had purchased stolen jewels from the house of one Shri Sharif of Chamarajanagar, said to have been stolen by one Honnalli Papanna who was arrested in Kollegal. The thief was brought to Mysore and was taken to M/s Raghuveera Jewellers in Ashoka Road, Mysore. The thief did not identify the owner of the above shop to whom the stolen jewels said to have been sold. Even then the Police took Shri Janardhan to the Police Station and harassed him. Due to this harassment, he was admitted and had to take treatment in a nursing home. When he was in the nursing home, the Police had been to his house and procured jewels belonging to the owner weighing about 432 grams which he had declared with the Excise Department. In addition to this, the Police have carried from his house one pair of diamond ear rings weighing about 8.5 grams which also come under declaration. But the police have given a receipt that they have received 432 grams of gold ingots. This is absolutely false. The jewels taken by the Police contained gold bangles, gold chains, gold dollar chains, gold rings etc. apart from the earrings stated above. Hence I urge the Government to order for a thorough enquiry and take suitable action against the culprits.

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು). - ಈ ವಿಷಯದಲ್ಲಿ ಮೇಲ್ಮನೆಯಲ್ಲಿ ಹೇಳಿಕೆ ಕೊಟ್ಟಿದ್ದೇನೆ. ಈಗ ಹೊಸ ಪಾಯಿಂಟನ್ನು ಅವರು ಹೇಳುತ್ತಾ ಇದ್ದಾರೆ. ಅದಕ್ಕೆ ನಾಳೆ ಹೇಳಿಕೆ ಕೊಡುತ್ತೇನೆ.